(ಇಂದು ದಿನಾಂಕಃ 05-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಕೆ. ಆರ ವಕೀಲರಿಂದ :**

1. ನಾನು ನನ್ನ ತಾಯಿಯ ಆಧಾರ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದು ಯಾವ ವರ್ಷದಲ್ಲಿ ತೆಗೆಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಆಧಾರ ಕಾರ್ಡ ನನ್ನ ತಾಯಿಯೆ ತೆಗೆಸಿರುತ್ತಾರೆ. ನನ್ನ ತಾಯಿಯ ಆಧಾರ ಕಾರ್ಡ ತೆಗೆದಾಗ ಸಾಯಪ್ಪ ತೀರಿಕೊಂಡಿದ್ದರು. ನನ್ನ ತಾಯಿಯ ಆಧಾರ ಕಾರ್ಡ ತೆಗೆಸಲು ನನ್ನ ತಾಯಿ ಯಾವ ಯಾವ ದಾಖಲೆ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಈ ಆಧಾರ ಕಾರ್ಡಕಿಂತ ಮೊದಲು ನನ್ನ ತಾಯಿಯ ಬೇರೆ ಆಧಾರ ಕಾರ್ಡ ಇರಲಿಲ್ಲ. ನನ್ನ ತಾಯಿಯ ಆಧಾರ ಕಾರ್ಡ ನನ್ನ ತಾಯಿಯೆ ತೆಗೆಸುವಾಗ ಸಾಯಪ್ಪ ಅವರ ಗಂಡ ಎಂದು ತೋರಿಸಲು ಯಾವ ದಾಖಲೆ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಮೊದಲು ಸಾಕ್ಷಿ ಕೊಡುವಾಗ ನನ್ನ ತಾಯಿಯ ಆಧಾರ ಕಾರ್ಡ ಯಾಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾನು ಹುಡುಕಿದ ನಂತರ ಅದು ಸಿಕ್ಕಿದೆ ಆದ್ದರಿಂದ ನಂತರ ಸಲ್ಲಿಸಿದ್ದೇನೆ. ನನ್ನ ವಾದ ಪತ್ರದಲ್ಲಿ ಅಥವಾ ನನ್ನ ಸಾಕ್ಷದಲ್ಲಿ ನನ್ನ ತಾಯಿಯ ಆಧಾರ ಕಾರ್ಡ ಇದೆ ಎಂದು ನಾನು ಬರೆದಿಲ್ಲ. ಈ ದಾವೆಗೆ ಅನುಕೂಲವಾಗುವಂತೆ ನನ್ನ ತಾಯಿಯ ಆಧಾರ ಕಾರ್ಡ ನಾನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ನಮ್ಮ ಮನೆಯಲ್ಲಿ ಇದ್ದ ಆಧಾರ ಕಾರ್ಡ ನಾನು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಾಯಿಯ ಸಾಯಪ್ಪನ ಹೆಂಡತಿ ಅಲ್ಲ ಆದರು ಸಹ ನಾನು ಸುಳ್ಳು ಆಧಾರ ಕಾರ್ಡ ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ನಿ.ಪಿ-15 ಕೃಷ್ಣ ಗ್ರಾಮೀಣ ಬ್ಯಾಂಕಿನ ಪಾಸ ಬುಕ್ ಆಗಿದ್ದು ಅದು ಯಾವಾಗ ತೆಗೆಸಿದ್ದರು ಎಂದು ನನಗೆ ಗೊತ್ತಿಲ್ಲ. ಅದನ್ನು ಸಲ್ಲಿಸುವಾಗ ನಾನು ನೋಡಿ ಸಲ್ಲಿಸಿರುತ್ತೇನೆ. ನಿ.ಪಿ-

15 ರಲ್ಲಿ ನನ್ನ ತಾಯಿ ಮತ್ತು ಸಾಯಪ್ಪನ ಹೆಸರು ಕಂಪ್ಯೂಟರ ಟೈಪ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ಪಾಸ ಬುಕ್ ತೆಗೆದಾಗ ಸಾಯಪ್ಪ ತೀರಿಕೊಂಡಿದ್ದರೊ ಇಲ್ಲವೊ ನನಗೆ ಗೊತ್ತಿಲ್ಲ. ಸಾಯಪ್ಪ ತೀರಿಕೊಂಡ ನಂತರ ನಿ.ಪಿ-15 ರಲ್ಲಿ ನಾನೇ ಕೈಬರವಣಿಗೆಯಲ್ಲಿ ನನ್ನ ತಾಯಿ ಹಾಗೂ ಸಾಯಪ್ಪನ ಹೆಸರು ಬರೆದಿರುತ್ತೇನೆ ಎಂದರೆ ಸಾಕ್ಷಿ ಬ್ಯಾಂಕಿನಲ್ಲಿ ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಮತ ಹಾಕುವ ಮೊದಲು ನನ್ನ ತಾಯಿ ಮತ ಹಾಕುತ್ತಿದ್ದಳು. ನನ್ನ ತಾಯಿ ನಿಡಗುಂದಾ ಗ್ರಾಮದಲ್ಲಿ ಮತ ಹಾಕುತ್ತಿದ್ದಳು. ನಿಡಗುಂದಾ ಗ್ರಾಮದಲ್ಲಿ ಯಾವ ಇಸವಿಯ ಮತದಾರರ ಪಟ್ಟಿಯಲ್ಲಿ ನನ್ನ ತಾಯಿಯ ಹೆಸರು ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆ ಆಗಿ 26 ವರ್ಷ ಆಗಿದೆ. ನನ್ನನ್ನು ಹಾಲಕುಡ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಹಾಲಕುಡ ಗ್ರಾಮದಲ್ಲಿ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಬರುತ್ತಿದೆ, ಆದರೆ ಯಾವ ವರ್ಷದಿಂದ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. ಹಾಲಕುಡ ಗ್ರಾಮದಲ್ಲಿ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಯಾವ ಇಸವಿಯಲ್ಲಿ ಸೇರಿಸಲಾಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ತಾಯಿಯ ಹೆಸರು ಮಹಾದೇವಮ್ಮ ಅವರ ತಂದೆಯ ಹೆಸರು ಚಂದ್ರಪ್ಪ ಇರುತ್ತದೆ. ನನ್ನ ಗಂಡನ ಹೆಸರು ಜಗದೀಶ. ವಿಠಲ್ ತಂದೆ ಚಂದ್ರಪ್ಪ ಜಗದೀಶರವರ ಅಣ್ಣ ಇರುತ್ತಾರೆ. ರಾಧಮ್ಮ ವಿಠಲ್ ರವರ ಹೆಂಡತಿ ಎಂದರೆ ಸರಿ. ದತ್ತು ತಂದೆ ಚಂದ್ರಪ್ಪ ಜಗದೀಶರವರ ಅಣ್ಣ ಇರುತ್ತಾರೆ. ಶರಣಮ್ಮ ದತ್ತುರವರ ಹೆಂಡತಿ ಎಂದರೆ ಸರಿ. ನಾನು 10 ನೇ ತರಗತಿಯವರೆಗೆ ಶಾಲೆ ಕಲಿತಿರುತ್ತೇನೆ. ಸಾಕ್ಷಿಗೆ 1998 ರ ಹಾಲಕುಡ ಗ್ರಾಮದ ಮತದಾರರ ಪಟ್ಟಿಯ ದೃಢೀಕ್ರತ ನಕಲನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಮಹಾದೇವಮ್ಮ,ವಿಠಲ್, ರಾಧಮ್ಮ, ಈರಮ್ಮ, ದತ್ತು, ಶರಣಮ್ಮ ಮತ್ತು ಜಗದೀಶ ಎಲ್ಲರೂ ನಮ್ಮ ಮನೆಯವರು ಎಂದು ಹೇಳುತ್ತಾರೆ. ಸಾಕ್ಷಿ ಸದರಿ ಮತದಾರರ ಪಟ್ಟಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಡಿ-10 ಎಂದು ಗುರುತಿಸಲಾಯಿತು.

ನಿ.ಡಿ-10 ರಲ್ಲಿ ಪುಟಸಂಖೆ 4 ರಲ್ಲಿ ನನ್ನ ಹೆಸರು ಇರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ನಿ.ಡಿ-10(ಎ) ಎಂದು ಗುರುತಿಸಲಾಯಿತು. ನಿಡಗುಂದಾ ಗ್ರಾಮದಲ್ಲಿ ಹಾಗೂ ಹಾಲಕುಡ ಗ್ರಾಮದಲ್ಲಿ ಒಂದೇ ವರ್ಷದಲ್ಲಿ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಸೇರಿಸಲಾಯಿತಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ನನ್ನ ತಂದೆ ಸೇರಿಸಿದರು ಎಂದು ಹೇಳುತ್ತಾರೆ. ನಿಡಗುಂದಾ ಗ್ರಾಮದ ಮತದಾರರ ಪಟ್ಟಿಯಲ್ಲಿ ನನ್ನ ತಾಯಿಯ ಹೆಸರು ಎಷ್ಟು ವರ್ಷಗಳಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ, ಆದರೆ ನನಗಿಂತ ಮೊದಲು ಅವರ ಹೆಸರು ಬರುತ್ತಿತ್ತು. ನಿ.ಪಿ-16 ರಲ್ಲಿ 1998 ರ ಹೆಚ್ಚುವರಿ ಮತದಾರರ ಪಟ್ಟಿಯಲ್ಲಿ ನನ್ನ ಹಾಗೂ ನನ್ನ ತಾಯಿಯ ಹೆಸರು ಯಾಕೆ ಸೇರಿಸಲಾಯಿತು ಎಂದರೆ ಸಾಕ್ಷಿ ಅದು ನನ್ನ ತಂದೆಗೆ ಗೊತ್ತು ಎಂದು ಹೇಳುತ್ತಾರೆ. ನಿ.ಪಿ-16 ರನ್ನು ತಹಸೀಲ್ದಾರ ಕಛೇರಿಯಿಂದ ಪಡೆಯಲು ಅರ್ಜಿಯಲ್ಲಿ ಮೇ ತಿಂಗಳ 2024 ರಲ್ಲಿ ಕೊಟ್ಟಿದ್ದೆ. ನಿ.ಪಿ-16 ರಲ್ಲಿ 1998 ರ ಹೆಚ್ಚುವರಿ ಮತದಾರರ ಪಟ್ಟಿಯಲ್ಲಿ ನನ್ನ ಹಾಗೂ ನನ್ನ ತಾಯಿಯ ಹೆಸರು ಇದೆ ಎಂದು ಸಲ್ಲಿಸಿದ್ದು ಅದರಲ್ಲಿ 1043 ಮತದಾರರು ಇದ್ದರು ಎಂದು ಬರೆದಿದೆ ಎಂದರೆ ಸರಿ. 1043 ಮತದಾರರು ಇದ್ದಾಗ ನನ್ನ ತಾಯಿಯ ಕ್ರಮ ಸಂಖ್ಯೆ 1045 ಮತ್ತು ನನ್ನ ಮತದಾರರ ಕ್ರಮಸಂಖ್ಯೆ 1046 ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಾನು ನಿ.ಪಿ-16 ರನ್ನು ತಹಸೀಲ್ದಾರವರ ಕಛೇರಿಯವರ ಜೊತೆ ಶಾಮೀಲಾಗಿ ಸೃಷ್ಟಿಸಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 1998-99 ರ ಇಸವಿಯಲ್ಲಿ ನನ್ನ ವಯಸ್ಸು ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಮತ ಹಾಕಲು 18 ವರ್ಷ ಆಗಿರಬೇಕು ಎಂದರೆ ಸರಿ. ನನ್ನ ಶಾಲೆಯ ದಾಖಲಾತಿಯಲ್ಲಿ ನನ್ನ ಜನ್ಮ ದಿನಾಂಕ 1984 ಎಂದು ಬರೆದಿರುತ್ತದೆ. ನನ್ನ ಶಾಲೆಯ ದಾಖಲಾತಿ ಮತ್ತು ನನ್ನ ತಂಗಿಯ ಶಾಲೆಯ ದಾಖಲಾತಿ ಮತ್ತು ನಿ.ಪಿ-14 ರಿಂದ 16 ದಾಖಲೆಗಳು ಈ ದಾವೆಗೆ ಅನುಕೂಲ ಆಗುವಂತೆ ಸೃಷ್ಟಿಸಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ

ದಾಖಲೆಗಳಿಂದ ನನ್ನ ತಾಯಿ ಸಾಯಪ್ಪನ ಹೆಂಡತಿ ಮತ್ತು ನಾನು ಅವರ ಮಗಳು ಎಂದು ಸಾಬಿತಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನನ್ನ ತಂಗಿ ಕುಟುಂಬ ನ್ಯಾಯಾಲಯ ಕಲ್ಬುರಗಿಯಲ್ಲಿ ಸುಳ್ಳು ದಾವೆ ಸಲ್ಲಿಸಿ ಅಲ್ಲಿ ಸೋತ ನಂತರ ನಾನು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಸಾಯಪ್ಪನ ಹೆಂಡತಿ ಮತ್ತು ನಾನು ಅವರ ಮಗಳು ಅಲ್ಲದಿದ್ದರು ಸಹ ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.